ಮಂತ್ರಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಾನ್ಯರವರೆ,

ವಿಷಯ:–Improvements and Balance works to Ambedkar Bhavana in Ward No.04 of Yelahanka Satelite Town Sub Division ಕಾಮಗಾರಿಯನ್ನು ತುರ್ತು ಕಾಮಗಾರಿಯೆಂದು ಪರಿಗಣಿಸಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮೋದನೆ ನೀಡುವ ಕುರಿತು.

ಉಲ್ಲೇಖ:– ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂ ಎಸ್ ವೈ 2018 ಬೆಂಗಳೂರು ದಿನಾಂಕ: 20–09–2019

ಅಂದಾಜು ಮೊತ್ತ : ರೂ. 60.00 ಲಕ್ಷಗಳು

ಜಾಬ್ ಕೋಡ್ ಸಂಖ್ಯೆ: 004–20–000022

****

1) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬಿಬಿಎಂಪಿ ಯಲಹಂಕ ವಿಧಾನಸಭಾ ಕ್ಷೇತ್ರ ವಾರ್ಡ್ ನಂ:04ಕ್ಕೆ ಸಂಬಂಧಿಸಿದಂತೆ ಘನ ಸರ್ಕಾರವು ವಾರ್ಡ್ ಮಟ್ಟದಲ್ಲಿ 2018–19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಒಟ್ಟು ರೂ.2500.00 ಕೋಟಿಗಳ ಮೊತ್ತದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪೂರ್ವಭಾವಿ ಕೆಲಸ ಕಾರ್ಯಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ಅದರಂತೆ ರೂ.2500.00 ಕೋಟಿಗಳ ಜೊತೆಯಲ್ಲಿ 5515.37 ಕೋಟಿಗಳ ಹೆಚ್ಚುವರಿ ಅನುದಾನ ಸೇರಿದಂತೆ ಒಟ್ಟು ರೂ.8015.37 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳುವ ಕ್ರಿಯಾ ಯೋಜನೆಗೆ 16 ಷರತ್ತುಗಳನ್ನು ವಿಧಿಸಿ ಅನುಮೋದನೆ ನೀಡಿದೆ.

2) ಮುಂದುವರೆದು, 2018–19ನೇ ಸಾಲಿನ "ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಯೋಜನೆ ಅಡಿಯಲ್ಲಿ ಅನುಬಂಧ–6ರ ಕ್ರಿಯಾ ಯೋಜನೆ ಕಾಮಗಾರಿ ಕ್ರಮ ಸಂಖ್ಯೆ:238ರಲ್ಲಿ ಅಂಬೇಡ್ಕರ್ ಭವನದ ಬಾಕಿ ಕಾಮಗಾರಿಗಳನ್ನು ನಿರ್ವಹಿಸಲು ರೂ.60.00 ಲಕ್ಷಗಳಿಗೆ ಅನುಮೋದನೆಗೊಂಡಿರುತ್ತದೆ. ಈ ಕಾಮಗಾರಿ ಜಾಬ್ ಸಂಕೇತ 004–20–000022 ರೂ.60.00 ಲಕ್ಷಗಳಿಗೆ ನೀಡಲಾಗಿರುತ್ತದೆ.

3) ವಾರ್ಡ್ ನಂ:04ರಲ್ಲಿ ಬಿಬಿಎಂಪಿ ಆಯವ್ಯಯದ ಅನುದಾನದ ಲೆಕ್ಕ ಶೀರ್ಷಿಕೆ ಪಿ–2670 ಅಡಿಯಲ್ಲಿ ರೂ.1030.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಸಮುದಾಯ ಭವನವನ್ನು ನಿರ್ಮಾಣ ಮಾಡಲಾಗಿದ್ದು, ಕೆಲವು ಅವಶ್ಯಕ ಕಾಮಗಾರಿಗಳು ಬಾಕಿ ಇರುವುದರಿಂದ ಕಟ್ಟಡವನ್ನು ಸಾರ್ವಜನಿಕ ಉಪಯೋಗಕ್ಕೆ ಸಮರ್ಪಸಲು ಸಾಧ್ಯವಾಗುತ್ತಿರುವುದಿಲ್ಲ. ಅತ್ಯಂತ್ಯ ಅವಶ್ಯಕ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ನಿರ್ವಹಿಸಲು ನವ ನಗರೋತ್ಥಾನ ಯೋಜನೆ ಅನುಬಂಧ–2 ಕ್ರಮ ಸಂಖ್ಯೆ:238 ರಲ್ಲಿ ರೂ.60.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ.

4) ಸರ್ಕಾರದ ಆದೇಶ ಸಂಖ್ಯೆ :ನಅಇ 250 ಎಂಎಸ್‌ವೈ 2019 ಬೆಂಗಳೂರು ದಿನಾಂಕ: 15–10–2019ರಂತೆ ಸದರಿ ಕಾಮಗಾರಿಯನ್ನು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಆದೇಶ ನೀಡಲಾಗಿರುತ್ತದೆ.

5) ಈ ಮೇಲಿನ ಪ್ರಸ್ತಾವನೆಯಂತೆ ಸದರಿ ಕಾಮಗಾರಿಗೆ 2018–19ನೇ ಸಾಲಿನ ಪಿಡಬ್ಲ್ಯೂಡಿ ಬೆಂಗಳೂರು ವೃತ್ತ ದರಪಟ್ಟಿ ಮತ್ತು 2019–20ನೇ ಸಾಲಿನ ವಿದ್ಯುತ್ ದರಗಳ ಪಟ್ಟಿಯಂತೆ ಹಾಗೂ ಅನುಮೋದಿತವಾಗಿರುವ ಜೇಟಾ ದರಗಳಂತೆ ರೂ.60.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಈ ಅಂದಾಜು ಪಟ್ಟಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಈ ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಹಾಗೂ

ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕಾಮಗಾರಿಯನ್ನು "ಅತಿ ತುರ್ತು ಕಾಮಗಾರಿ" ಎಂದು ಪರಿಗಣಿಸಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮೋದನೆ ನೀಡಲು ತಮ್ಮ ಮುಂದಿನ ಆದೇಶ ಕೋರಿ ಕಡತವನ್ನು ಮಂಡಿಸಿದೆ.

ಸಹಾಯಕ ಅಭಿಯಂತರರು

ಸ.ಕಾ.ಪಾ.ಅ(ಯೋ.ವಿ)

6)

ಕಂಡಿಕೆ (01) ರಿಂದ (05) ರವರೆಗೆ ವಿವರಿಸಿರುವಂತೆ ಅಂಬೇಡ್ಕರ್ ಭವನ ಕಟ್ಟಡದಲ್ಲಿ ಕೆಲವು ಐಟಂಗಳು ಮೂಲ ಅಂದಾಜು ಪಟ್ಟಿಯಲ್ಲಿ ಸೇರ್ಪಡೆಗೊಳದೆ ಉಳಿದಿರುವ ಅವಶ್ಯಕವಾಗಿ ಸಿವಿಲ್ ಮತ್ತು ವಿದ್ಯುತ್ ಬಾಕಿ ಕೆಲಸಗಳನ್ನು ನಿರ್ವಹಿಸುವುದು ಅವಶ್ಯಕವಾಗಿರುತ್ತದೆ ಹಾಗೂ ಸದರಿ ಕಟ್ಟಡವನ್ನು ಉದ್ಘಾಟನೆ ಮಾಡಲು ಘನಾನ್ವಿತ ಮುಖ್ಯ ಮಂತ್ರಿಗಳು ದಿನಾಂಕವನ್ನು ನಿಗಧಿಪಡಿಸಲು ಮಾನ್ಯ ಆಯುಕ್ತರವರು ಈಗಾಗಲೇ ಕೋರಿರುವುದರಿಂದ ಈ ಹಿನ್ನೆಲೆಯಲ್ಲಿ ಕಾಮಗಾರಿ ಅಂದಾಜು ಮೊತ್ತ ರೂ.60.00 ಲಕ್ಷಗಳಿಗೆ ಅನುಮೋದನೆ ನೀಡಲು ಸರ್ಕಾರದ ಆದೇಶದ ಸಂಖ್ಯೆ: ನಅಇ 250 ಎಂಎನ್‌ವೈ 2019 ಬೆಂಗಳೂರು ದಿನಾಂಕ:15-10-2019ರ ಆದೇಶದಂತೆ ಈ ಕಾಮಗಾರಿಯನ್ನು ಅತಿ ತುರ್ತು ಎಂದು ಪರಿಗಣಿಸಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮೋದನೆ ನೀಡಲು ಮಾನ್ಯ ಆಯುಕ್ತರಿಗೆ ಕಡತವನ್ನು ಸಲ್ಲಿಸಲು ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ಸ.ಕಾ.ಪಾ.ಅ(ಯೋ.ವಿ)

7)

ಮುಖ್ಯ ಅಭಿಯಂತರರು(ಯ.ವ)

ಕಂಡಿಕೆ(01) ರಿಂದ (06) ರವರೆಗೆ ಅವಗಾಹನೆಗೆ ತರುತ್ತಾ, ವಾರ್ಡ್ ನಂ.04 ಅಂಬೇಡ್ಕರ್ ಭವನವನ್ನು ಪಾಲಿಕೆ ಆಯುವ್ಯಯದ ಲೆಕ್ಕ ಶೀರ್ಷಿಕೆಯಲ್ಲಿ ನಿರ್ಮಾಣ ಮಾಡಲಾಗಿದ್ದು ಸದರಿ ಕಟ್ಟಡವನ್ನು ಸಾರ್ವಜನಿಕರ ಬಳಕೆ ಸಮರ್ಪನೆ ಮಾಡಲು ಸದರಿ ಕಟ್ಟಡವನ್ನು ಉದ್ಘಾಟಿಸಲು ಮಾನ್ಯ ಶಾಸಕರು ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ಕೋರಿರುವಂತೆ ಸನ್ಮಾನ್ಯ ಮುಖ್ಯ ಮಂತ್ರಿಯವರು ಉಪ ಕಾರ್ಯದರ್ಶಿಗಳು ಹಾಗೂ ವಿಶೇಷ ಕರ್ತವ್ಯಾಧಿಕಾರಿ ರವರು ಕಟ್ಟಡಕ್ಕೆ ಸಂಬಂಧಪಟ್ಟಂತೆ ವರದಿಯನ್ನು ಸಲ್ಲಿಸಲು ಕೋರಿರುವಂತೆ ಈಗಾಗಲೇ ಕಟ್ಟಡಕ್ಕೆ ಸಂಬಂಧಪಟ್ಟ ವಿವರವಾದ ವರದಿಯೊಂದಿಗೆ ಸನ್ಮಾನ್ಯ ಮುಖ್ಯ ಮಂತ್ರಿಗಳಿಂದ ದಿನಾಂಕವನ್ನು ನಿಗಧಿಪಡಿಸುವಂತೆ ಕೋರಲಾಗಿರುತ್ತದೆ. ಉದ್ಘಾಟನೆಗೆ ಮೊದಲು ಕಟ್ಟಡದ ಕೆಲವು ಸಿವಿಲ್ ಹಾಗೂ ವಿದ್ಯುತ್ ಅವಶ್ಯಕ ಕೆಲಸಗಳು ಬಾಕಿ ಇದ್ದು, ಉದ್ಘಾಟನೆಗೆ ಮೊದಲು ಬಾಕಿ ಕೆಲಸಗಳನ್ನು ತುರ್ತಾಗಿ ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ನಿರ್ವಹಿಸಬೇಕಾಗಿರುವುದರಿಂದ ಸರ್ಕಾರದ ಆದೇಶದ ಸಂಖ್ಯೆ: ನಅಇ 250 ಎಂಎನ್‌ವೈ 2019 ಬೆಂಗಳೂರು ದಿನಾಂಕ:15-10-2019ರಂತೆ ಆದೇಶದಲ್ಲಿ ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮೋದನೆ ನೀಡಲಾಗಿರುತ್ತದೆ ಈ ಎಲ್ಲಾ ಅಂಶಗಳು ಹಿನ್ನೆಲೆಯಲ್ಲಿ ಈ ಕಾಮಗಾರಿಯನ್ನು ತುರ್ತು ಕಾಮಗಾರಿಯೆಂದು ಪರಿಗಣಿಸಿ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ಕಾಮಗಾರಿಯನ್ನು ನಿರ್ವಹಿಸಲು ಮಾನ್ಯ ಆಯುಕ್ತರ ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ Balance works to Ambedkar Bhavan in Ward No. 09 of Yelahanka New Town. ಪುಟದ ಸಂಖ್ಯೆ -3-

ಕಡತದ ಸಂಖ್ಯೆ ಬಿ.ಒ/ಮುಖ್ಯ/ವಿಚಕ್ಷ/19-20

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
8.	Para 7/N for your kind perusal and approval.
9)	Hon. Comm. Sir Agreed to Para 7/NF.

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

K. H. Anil
4/11/2019
Commissioner
Bruhat Bengaluru Mahanagara Palike

ಬಿ.ಬಿ.ಎಂ.ಪಿ. ಆಯುಕ್ತರ ಅಕ್ಷ ಕಾರ್ಯಾಲಯ
ಸಂಖ್ಯೆ ಬಿ.ಎಸ್.ಆರ್. ಸಿ 5229
ದಿನಾಂಕ 04-11-19

ಬಿಬಿಎಂಪಿ ಕಛೇರಿ * 26-ಸಾಲಾರ್ಜಂಗ್ ರಸ್ತೆ * ಬೆಂಗಳೂರು
31/10/19-20
4/11/19

ಬಿಸ Anil - Vishwas

4/11/19